ಆ) ಈ ಅಣೆಕಟ್ಟೆಗಾಗಿ 192 ಕುಟುಂಬಗಳು ಜಮೀನನ್ನು ಕಳೆದುಕೊಂಡಿರುತ್ತಾರೆ.

ಇ) ಇಲ್ಲ

ಈ) ಈ ಯೋಜನೆಯಿಂದ ಜಮೀನು ಕಳೆದುಕೊಂಡ ಕುಟುಂಬಗಳಿಗೆ ಸರ್ಕಾರವು ಪುನರ್ವಸತಿ ಹಾಗೂ ಜಮೀನನ್ನು ಮಂಜೂರು ಮಾಡಲಾಗಿದ್ದು, ಇದಕ್ಕೆ ಸಂಬಂಧಪಟ್ಟ ಪೂರ್ಣ ವಿವರಗಳು ಈ ಕೆಳಕಂಡಂತಿರುತ್ತೆ.

ಮುಳುಗಡೆಯಾದ ಗ್ರಾಮದ ಹೆಸರು	ಒಟ್ಟು ನಿರಾಶ್ರಿತ ಕುಟುಂಬಗಳ ಸಂಖ್ಯೆ	ಮಂಜೂರಾದ ಒಟ್ಟು ಜಮೀನು	ಯಾವ ಗ್ರಾಮದಲ್ಲಿ ಮಂಜೂರಾಗಿದೆ
1. ವಾಡಳ್ಳಿ	50	125-00	ಚೋಳನಾಯ್ಕನಹಳ್ಳಿ
2. ಅವ್ವೇರಹಳ್ಳಿ	23	43-00	ಅವ್ವೇರಹಳ್ಳಿ
	16	24-00	ವರ್ತೂರು
	17	28-00	ಕಡಬಗೆರೆ
	79	122-00	ಕೋಲೂರು
3. ವೀರಾಪುರ	30	49-30	ಕಡಬಗೆರೆ

ಸೈಟುಗಳ ವಿಂಗಡಣೆ

1. ಅವ್ವೇರಹಳ್ಳಿ	65	ಕೋಲೂರು
	14	ವರ್ತೂರು
	14	ಕಡಬಗೆರೆ
	61	ಅವ್ವೇರಹಳ್ಳಿ
2 ವೀರಾಪುರ	27	ಕಡಬಗೆರೆ

ರಾಜ್ಯದಲ್ಲಿ ಅರಣ್ಯಕ್ಕೆ ಸೇರಿದ ಜಮೀನುಗಳ ಒತ್ತುವರಿ

652 - ಶ್ರೀ ಅಂಜನಾಮೂರ್ತಿ (ನೆಲಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅರಣ್ಯಕ್ಕೆ ಸೇರಿದ ಭೂಮಿಯನ್ನು ಇದುವರೆವಿಗೂ ಒತ್ತುವರಿ ಮಾಡಿದ ವಿಸ್ತೀರ್ಣ ಎಷ್ಟು, ಇದರಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಜನಾಂಗದವರ ಭೂಮಿಯೆಷ್ಟು?

ಆ) ನೆಲಮಂಗಲ ಕ್ಷೇತವಿದ ಅರಣ್ಯ ಹಾಗೂ ಕೆರೆ ಅಂಗಳಕ್ಕೆ ಸೇರಿದ ಎಷ್ಟು ಎಕರೆ ಪ್ರದೇಶವನ್ನು ಸಾರ್ವಜನಿಕರು ಒತ್ತುವರಿ ಮಾಡಿರುತ್ತಾರೆ?

ಇ) ಅದರಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಜನಾಂಗದವರು ಉಳುಮೆ ಮಾಡುತ್ತಿರುವ ಭೂಮಿಯ ವಿಸ್ತೀರ್ಣವೆಷ್ಟು?

ಈ) ಹಾಗಿದ್ದಲ್ಲಿ, ಈ ಜನರು ಉಳುಮೆ ಮಾಡುತ್ತಿರುವ ಜಮೀನನ್ನು ಸಕ್ರಮಗೊಳಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) 1,63,777-34 ಎಕರೆಗಳು

ಪರಿಶಿಷ್ಟ ಜಾತಿ 57510-06 ಎಕರೆಗಳು

ಪರಿಶಿಷ್ಟ ವರ್ಗ

ಅ) ಅರಣ್ಯ ಭೂಮಿ 29-00 ಎಕರೆಗಳು

ಕೆರೆ ಅಂಗಳ 19-17 ಎಕರೆಗಳು

ಇ) ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ

ಅರಣ್ಯ ಭೂಮಿ 22-00 ಎಕರೆಗಳು

ಕೆರೆ ಅಂಗಳ 2-00 ಎಕರೆಗಳು

ಈ) ಇಲ್ಲ, ಅರಣ್ಯ ಮತ್ತು ಕೆರೆ ಅಂಗಳ ಪ್ರದೇಶಗಳಲ್ಲಿನ ಅನಧಿಕೃತ ಸಾಗುವಳಿಯನ್ನು ಸಕ್ರಮಿಕರಿಸಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ.

ಬಗರ್‌ಹುಕುಂ ಜಮೀನನ್ನು ಸಕ್ರಮಗೊಳಿಸಲು ನಿಗಧಿತ ವೇಳೆಯಲ್ಲಿ ಅರ್ಜಿ ಸಲ್ಲಿಸದೆ ಇರುವವರಿಗೆ ಕ್ರಮ.

654 - ಶ್ರೀ ಎಸ್. ಚಿಕ್ಕಮಾಧು, (ಹುಣಸೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಜಮೀನನ್ನು ಅನಧಿಕೃತವಾಗಿ ಹಲವಾರು ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದು, ಕಾರಣಾಂತರಗಳಿಂದ ನಿಗಧಿತ ವೇಳೆಯಲ್ ಅರ್ಜಿ ಸಲ್ಲಿಸದೆ ಇರುವವರಿಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಆ) ಸರ್ಕಾರಿ ಗೋಮಾಳ ಜಮೀನನ್ನು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸಕ್ರಮಗೊಳಿಸು ಸರ್ಕಾರವು ಕೈಗೊಂಡ ಕ್ರಮಗಳಾವುವು?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) ನಿಗಧಿಪಡಿಸಿದ ದಿನಾಂಕವಾದ 19-9-1991ರ ನಂತರ ಬಂದ ಅರ್ಜಿಗಳನ್ನು ಸಕ್ರಮಗೊಳಿಸುವ ಬಗ್ಗೆ ಪರಿಗಣಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಅವುಗಳನ್ನು ಸಂಬಂಧಿಸಿದ ತಹಶೀಲ್ದಾರರು ವಿಲೇ ಮಾಡಿರುತ್ತಾರೆ.

ಆ) ನಿಯಮಾವಳಿಯನ್ನು ಸೂಕ್ತ ತಿದ್ದುಪಡಿ ಮಾಡಿ ಗೋಮಾಳ ಜಮೀನಿನನ ಅಕ್ರಮ ಸಾಗುವಳಿಯನ್ನು ಸಕ್ರಮೀಕರಿಸಲು ಅವಕಾಶವನ್ನು ಕಲ್ಪಸಲಾಗಿದೆ.

ಮುಂಡರಗಿ ತಾಲ್ಲೂಕಿನಲ್ಲಿ ಚಂಡ ಮಾರುತದಿಂದಾದ ಹಾನಿಯ ಅಂದಾಜು.

633 - ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿ ತಾಲ್ಲೂಕಿನಲ್ಲಿ ಚಂಡಮಾರುತದಿಂದ ಬಿದ್ದ ಮನೆಗಳೆಷ್ಟು? ಹಾನಿಗೊಳಗಾದ ಪ್ರದೇಶದಲ್ಲಿ ಆಸ್ತಿ ಪಾಸ್ತಿಗಳಿಗಾದ ನಷ್ಟದ ಅಂದಾಜೆಷ್ಟು? ಹಾನಿಗೊಳಗಾದವರಿಗೆ ಸರ್ಕಾರವು ನೀಡಿರುವ ಪರಿಹಾರ ಧನವೆಷ್ಟು?

ಆ) ಮುಂಡರಗಿ ತಾಲ್ಲೂಕಿನ ಕಿಂಗಟಾಲೂರು, ಗುಮ್ಮಗೋಳ, ಹಮ್ಮಿಗಿ, ದಂಗಾಪ್ರರ, ಕೊರ್ಲಹಳ್ಳಿ ಹಾಗೂ ಬದರಹಳ್ಳಿ ಗ್ರಾಮಗಳು ಪೂರ್ತಿ ನಾಶವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಆ ಗ್ರಾಮಗಳ ಪುನರ್ವಸತಿಗಳಿಗಾಗಿ ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಎಂ. ರಾಜಶೇರಮೂರ್ತಿ (ಕಂದಾಯ ಸಚಿವರು) :